ಈ ದಿನ ದಿನಾಂಕಃ 06.08.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

12. ನಿಡಿ 8 ರಲ್ಲಿರುವ ಕ್ರಯಪತ್ರದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ಹಾಗಾಗಿ ಸದರಿ ಕ್ರಯಪತ್ರವನ್ನು ಪಾರ್ವತಮ್ಮ ಕೋಂ ಕೃಷ್ಣಪ್ಪ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1987 ನೇ ಸಾಲಿನಲ್ಲಿ ಪಾರ್ವತಮ್ಮನವರ ಹೆಸರಿನಲ್ಲಿದ್ದ ಪಂಚಾಯಿತಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಿಡಿ 9 ರಲ್ಲಿ ಪಾರ್ವತಮ್ಮ ಕೋಂ ಕೃಷ್ಣಪ್ಪನವರ ಹೆಸರು ಇರುವುದಿಲ್ಲ. ಪದ್ಮ ಕೋಂ ರಮೇಶ ಹಾಲಪ್ಪನವರ ಸೊಸೆ. ನಿಡಿ 10 ರಲ್ಲಿ ನಮೂದಿಸಿರುವ ಸಂಗತಿಗಳು ಸರಿ ಇರುತ್ತವೆ. ಪದ್ಮ ಕೋಂ ರಮೇಶರವರಿಂದ ನಾವು ಖಾನೆ ಷುಮಾರಿ ಸಂ. 67 ನ್ನು ಖರೀದಿಸಿರುತ್ತೇವೆ. ನೊಂದಾಯಿತ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಪಂಚಾಯಿತಿಯಲ್ಲಿ ವಿಭಾಗ ಮಾಡಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ನೊಂದಾಯಿತ ಪಾಲು ವಿಭಾಗ ಪತ್ರವನ್ನು ಮಾಡಿಸಿರುವುದಿಲ್ಲ. ನಿಪಿ 10 ಯಾವುದೇ ನೋಂದಾಯಿತ ಕ್ರಯಪತ್ರ ಪಾಲು ಪತ್ರದ ಮೇರೆಗೆ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರಮಾಣ ಪತ್ರದ ಮೂಲಕ ಮಾಡಿಸಿರುತ್ತೇವೆಂದು ನುಡಿಯುತ್ತಾರೆ. ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಪಂಚಾಯಿತಿಗೆ ನೀಡಿರುತ್ತೇನೆ ಅದರಂತೆ ಮ್ಯುಟೇಶನ್ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

13. ಹಾಲಪ್ಪನವರಿಗೆ ಇಬ್ಬರು ಗಂಡು ಮಕ್ಕಳು. ಒಂದು ಹೆಣ್ಣು ಮಗು ಇರುತ್ತದೆ. ಹಾಲಪ್ಪನವರ ಮರಣದ ನಂತರ ಅವರ ಆಸ್ತಿಗೆ ಎಲ್ಲಾ ಮಕ್ಕಳು ಹಕ್ಕುದಾರರು ಎಂದರೆ ಸರಿ. ಪದ್ಮ ಕೋಂ ರಮೇಶ್ ರವರಿಗೆ ಹಾಲಪ್ಪನವರ ಮರಣದ ನಂತರ ಆಸ್ತಿ ಯಾವ ರೀತಿ ಒಬ್ಬರಿಗೆ ಮಾತ್ರ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಡಿ 10 ರಂತೆ ಮ್ಯುಟೇಶನ್ ಮಾಡುವ ಕಾಲಕ್ಕೆ ಪದ್ಮ ನನ್ನ ಚಿಕ್ಕಪ್ಪನವರ ಸೊಸೆ ಹಾಗೂ ನನಗೆ ಅಕ್ಕ. 2019 ನೇ ಸಾಲಿನಲ್ಲಿ ನಿಪಿ 10 ರಂತೆ ಮ್ಯುಟೇಶನ್ ಮಾಡಿಸಿಕೊಳ್ಳುವ ಕಾಲಕ್ಕೆ ಪಾರ್ವತಮ್ಮ ಹಾಗೂ ಅವರ ವಾರುಸುದಾರರಿಗೆ ಪಂಚಾಯಿತಿಯಿಂದ ನೋಟಿಸ್ ನೀಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

14. ನಿಡಿ 9 ಮತ್ತು 10ರಲ್ಲಿರುವ ದಾಖಲೆಯನ್ನು ಪಾರ್ವತಮ್ಮ ಹಾಗೂ ಅವರ ವಾರುಸುದಾರರಿಗೆ ತಿಳಿಯದಂತೆ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮಿಲ್ ಆಗಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚಾಯಿತಿ ದಾಖಲೆಗಳನ್ನು ಅಧಿಕಾರಿಗಳೊಂದಿಗೆ ಶಾಮಿಲ್ ಆಗಿ ತಯಾರಿಸಿರುತ್ತೇನೆಂದರೆ ಸರಿಯಲ್ಲ. ನಿಡಿ 8 ರಲ್ಲಿರುವ ಕ್ರಯಪತ್ರವನ್ನು ಪಾರ್ವತಮ್ಮ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮನವರ ಅನಕ್ಷರತೆಯನ್ನು ದುರುಪಯೋಗ ಮಾಡಿಕೊಂಡು ಪಂಚಾಯಿತಿ ದಾಖಲೆಗಳನ್ನು ಅಧಿಕಾರಿಗಳೊಂದಿಗೆ ಹಾಗೂ ಹಾಲಪ್ಪನವರೊಂದಿಗೆ ಶಾಮಿಲ್ ಆಗಿ ತಯಾರಿಸಿರುತ್ತೇನೆಂದರೆ ಸರಿಯಲ್ಲ.

15. ಪದ್ಮಾ ಕೋಂ ರಮೇಶ್ ರವರಿಂದ ನಿಡಿ 10 ರಂತೆ ಮ್ಯುಟೇಶನ್ ಮಾಡುವ ಕಾಲಕ್ಕೆ ಮೂಲ ದಾಖಲಾತಿಗಳಾದ ನಿಡಿ 1 ರಲ್ಲಿರುವ ದಾಖಲೆಯನ್ನು ನಮಗೆ ನೀಡಿರುತ್ತಾರೆ. ನಿಡಿ 1ರಲ್ಲಿ ತಹಶೀಲ್ದಾರವರ ಸೀಲ್ ಇರುವುದಿಲ್ಲ ಎಂದರೆ ಸರಿ. ನಿಡಿ 1 ರಲ್ಲಿರುವ ದಾಖಲೆಯನ್ನು ನಾನು ಹಾಲಪ್ಪನವರೊಂದಿಗೆ ಸೇರಿ ಸುಳ್ಳು ದಾಖಲೆ ತಯಾರಿಸಿರುತ್ತೇನೆಂದರೆ ಸರಿಯಲ್ಲ. ನಿಡಿ 1 ರಲ್ಲಿ ಕೈಬರಹದಲ್ಲಿ ಬರೆದಿರುವ ದಿನಾಂಕದ ಕೆಳಗೆ ಯಾವುದೇ ಹಸ್ತಾಕ್ಷರ ಇರುವುದಿಲ್ಲ ಎಂದರೆ ಸರಿ. ನಿಡಿ 1 ರಲ್ಲಿರುವ ಖೊಟ್ಟಿ ದಾಖಲೆ ಮೇರೆಗೆ ನಿಡಿ 8 ನ್ನು ತಯಾರಿಸಿದ್ದೇನೆಂದರೆ ಸರಿಯಲ್ಲ.

16. ದಿಃ 12.06.1987 ರಂದು ಭೂಪರಿವರ್ತನೆ ಆಗಿರುತ್ತದೆ. ಭೂಪರಿವರ್ತನೆ ಆದ ತರುವಾಯ ಪಂಚಾಯಿತಿ ದಾಖಲೆಗೆ ಸೇರ್ಪಡೆಯಾಗಿರುತ್ತದೆ ಎಂದರೆ ಸರಿ. ನಿಡಿ 8 ರಲ್ಲಿ ಪಂಚಾಯಿತಿ ದಾಖಲೆಯಲ್ಲಿರುವಂತೆ ಖಾನೆ ಷುಮಾರಿ ಸಂ. 67 ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಿಃ 12.06.1987ರ ಪೂರ್ವದಲ್ಲಿ ನಿಡಿ 8 ತಯಾರು ಮಾಡಲಾಗಿರುತ್ತದೆ ಎಂದರೆ ಸರಿ. ಭೂಪರಿವರ್ತನೆ ದಾಖಲೆ ಹಾಗೂ ನಿಡಿ 8ರಲ್ಲಿರುವ ದಾಖಲೆಯನ್ನು ನಾವು ಸುಳ್ಳು ಸೃಷ್ಟಿಡಿರುತ್ತೇವೆಂದರೆ ಸರಿಯಲ್ಲ.

17. ಸರ್ವೆ ನಂ. 1/3 ರ 1 ಎಕರೆ 5 ಗುಂಟೆ ಜಮೀನಿನಲ್ಲಿ ಪಾರ್ವತಮ್ಮ ಭೂಪರಿವರ್ತನೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 1/3 ರ ದಕ್ಷಿಣ ಭಾಗಕ್ಕೆ ನಾನು ಹಾಗೂ 1ನೇ

ಪ್ರತಿವಾದಿ ಅಕ್ರಮವಾಗಿ ಮನೆ ನಿರ್ಮಾಣ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. 2021 ನೇ ಸಾಲಿನಲ್ಲಿ ವಾದಿ ನಾವು ಅಕ್ರಮವಾಗಿ ನಿರ್ಮಾಣ ಮಾಡಿರುವ ಮನೆಗಳನ್ನು ಬಿಟ್ಟು ಕೊಡುವಂತೆ



ಪ್ರಾರ್ಥಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ವಾದಿ ಬಿಟ್ಟುಕೊಡುವಂತೆ ಕೇಳಿದಾಗ ಪಂಚಾಯಿತಿ ದಾಖಲೆಗಳ ಪ್ರಕಾರ ಸದರಿ ಸ್ವತ್ತು ನಿಮಗೆ ಬಿಟ್ಟುಕೊಡುವ ಪ್ರಶ್ನೆ ಬರುವುದಿಲ್ಲವೆಂದು ನುಡಿದಿರುತ್ತಾರೆ. ಸಿ ಷೆಡ್ಯೂಲ್ ನಲ್ಲಿ ನಮೂದಿಸಿರುವ ಆಸ್ತಿಯನ್ನು ಬಿಟ್ಟುಕೊಡುವಂತೆ ವಾದಿಗಳು ನನಗೆ ಕೇಳಿರುತ್ತಾರೆ ಎಂದರೆ ಸರಿ. ನಾನು ಹಾಗೂ 1ನೇ ಪ್ರತಿವಾದಿ ಅಕ್ರಮವಾಗಿ ಆಕ್ರಮಿಸಿದ ಸಿ ಷೆಡ್ಯೂಲ್ ಸ್ವತ್ತನ್ನು ಬಿಟ್ಟುಕೊಡದಿರುವುದರಿಂದ ಸದರಿ ದಾವೆಯನ್ನು ವಾದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.